ಶ್ರೀ ಎಂ. ಪಿ. ಪ್ರಕಾಶ್.—ಈ ರೀತಿಯಾಗಿ ಸುಮಾರು ೩೦ ಲಕ್ಷ ಮಾನವ ದಿನಗಳ ಕೆಲಸ ಉತ್ಪತ್ತಿಮಾಡಿ ಕೊಟ್ಟಿದ್ದೇವೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಈ ರೀತಿ ಇರುವುದರಿಂದ ರಾಷ್ಟ್ರೀಯ ಉದ್ಯೋಗ ಧೃಡೀಕರಣ ಯೋಜನೆ ಹಾಗೂ ಬೇರೆ ಬೇರೆ ಕಾರ್ಯಕ್ರಮಗಳ ಅಡಿಯಲ್ಲಿ ಖಂಡಿತವಾಗಿಯೂ ಉದ್ಯೋಗ ಒದಗಿಸುವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಹಾಗೂ ಮುಂದೆ ವರದಿ ತರಿಸಿಕೊಂಡು ಈ ಕೆಲಸಗಳಿಗೆ ಆದ್ಯತೆಯನ್ನು ಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವತ್ತು ಫಾಡರ್‌ಗೆ ಹೆಚ್ಚು ಗಮನ ಕೊಡಬೇಕಾಗಿದೆ. ಆ ಏರಿಯಾದಲ್ಲಿ ಫಾಡರ್‌ಗೆ ಬಹಳ ತೊಂದರೆ ಇದೆ.

ಶ್ರೀ ಕೆ. ಬಿ ಶಾಣಪ್ಪ.—ಗುಲ್ಬರ್ಗಾದಿಂದ, ಯಾದ್ಗಿರ್‌ನಿಂದ ಸೇಡಂನಿಂದ ಜನರು ಕೆಲಸ ಹುಡುಕಿಕೊಂಡು ಹೋಗುತ್ತಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್.—ಮೇವಿನ ಬಗ್ಗೆ ಶೇಖರಣೆ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಂದ ಅಕಸ್ಮಾತ್ ಪತ್ರ ಬಂದಿದ್ದರೆ ಅದು ಕಂದಾಯ ಸಚಿವರಲ್ಲಿ ಇರುತ್ತದೆ. ನಾನು ಕಂದಾಯ ಸಚಿವರ ಜೊತೆ ಮಾತನಾಡಿ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ ಆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ. ಜಾನುವಾರುಗಳಿಗೆ ಮೇವು ಒದಗಿಸುವ, ಕೃಷಿ ಕಾರ್ಮಿಕರಿಗೆ ಕೆಲಸ ಒದಗಿಸುವ ಕೆಲಸವನ್ನು ನಾವು ನಿರಂತರವಾಗಿ ಮಾಡಬೇಕಾಗುತ್ತದೆ. ಈಗ ಹಣಕಾಸಿನ ಇತಿಮಿತಿ ಇರುವುದರಿಂದ ಜಿಲ್ಲಾಪರಿಷತ್ತಿನವರು ಯಾವುದೇ ಕೆಲಸ ಕಾರ್ಯಗಳನ್ನು ಮಾಡಬಾರದೆಂದೇನೂ ಇಲ್ಲ. ಆರ್ ಎಲ್ ಇ ಜಿ ಪಿಯಲ್ಲಿ ಕೇಂದ್ರ ಸರ್ಕಾರ ಒಪ್ಪಿಗೆ ಕೊಡುವುದರಲ್ಲಿ ವಿಳಂಬವಾಗಿರಬಹುದು; ಎನ್ ಆರ್ ಇ ಪಿ. ಸ್ಕೀಮ್‌ಟಿ ಕೆಲಸ ಮಿನಿಮಮ್ ನೀಡ್ ಪ್ರೋಗ್ರಾಮ್ ಕೆಲಸಗಳನ್ನು ಎಲ್ಲೂ ನಿಲ್ಲಿಸದೇ ಮುಂದುವರಿಸಿಕೊಂಡು ಹೋಗಬೇಕೆಂದು ಈ ದಿವಸವೇ ಮುಖ್ಯಕಾರ್ಯದರ್ಶಿಗಳವರ ಜೊತೆ ಮಾತನಾಡಿ ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆರ್ ಎಲ್ ಇ ಜಿ ಪಿ ಹಾಗೂ ಎನ್ ಆರ್ ಇ ಪಿ ಕಾರ್ಯಕ್ರಮಗಳನ್ನು ತಾವು ಮಾಡಲೇಬೇಕು. ನೀವು ಹಣ ಹಾಕಿ ಆ ಕೆಲಸ ಮಾಡದಿದ್ದರೆ ಬರುವ ಹಣವೂ ಹೋಗುತ್ತದೆ. ಅದು ಬೇರೆ ವಿಷಯ. ಇವೊತ್ತು ಸ್ಕೇರ್ಸಿಟಿಯಲ್ಲಿ ಸೈಸಿಫಿಕ್ಕಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೀವೆ ಎಂಬುದನ್ನು ತಾವು ಹೇಳಬೇಕು. ಹಾಗೂ ಎಷ್ಟು ಜನರಿಗೆ ಕೆಲಸ ಒದಗಿಸುತ್ತೀರಿ ಎಂದು ಹೇಳಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಈಗ ಇಲ್ಲಿ ಬಹಳ ಸೀಮಿತವಾದ ಪ್ರಶ್ನೆ ಚರ್ಚೆಯಲ್ಲಿದೆ. ಈ ಬಗ್ಗೆ ವ್ಯಾಪಕ ಚರ್ಚೆ ಆಗಬೇಕೆಂದರೆ ಮಾನ್ಯ ಕಂದಾಯ ಸಚಿವರ ಜೊತೆ ಈ ಬಗ್ಗೆ ಚರ್ಚೆ ಮಾಡುತ್ತೇನೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹರಾಜು ಮೂಲಕ ಮಾರಾಟ ಮಾಡಿದ ನಿವೇಶನಗಳು

೩೫೬. ಶ್ರೀಮತಿ ಕೆ. ಎಸ್ ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೮ ಜನವರಿ ತಿಂಗಳಿಂದ ೧೯೮೯ ಫೆಬ್ರವರಿ ಅಂತ್ಯದವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹರಾಜು ಮೂಲಕ ಮಾಡಿದ ವಿವಿಧ ಅಳತೆಯ ನಿವೇಶನಗಳ ಸಂಖ್ಯೆ ಎಷ್ಟು;

(ಪ್ರಾಧಿಕಾರದವರು ವಿವರ ನೀಡುವುದು) ಮತ್ತು ಅದರ ಒಟ್ಟು ಮೌಲ್ಯವೆಷ್ಟು;

ಆ) ಪ್ರಾಧಿಕಾರದಿಂದ ಮೂಲ ನಿವೇಶನ ಹೊರತು ಇತರೆ ನಿವೇಶನ ಹರಾಜು ಮಾಡಲು ಕಾರಣ ವೇನು ?

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೧) ೧,೧೨೯ ನಿವೇಶನಗಳು

೨) ೩೧೦೭.೮೫ ಲಕ್ಷ ರೂ.ಗಳು

ವಿವರಗಳು ಈ ಕೆಳಕಂಡಂತಿವೆ.

	ನಿವೇಶನಗಳು
೧) ಕೋರಮಂಗಲ ಬಡಾವಣೆ	೨೦೩
೨) ಹೆಚ್.ಎಎ.ಲ್.	೯೫
೩) ದೊಮ್ಮಲೂರು	೨೮
೪) ಇಂದಿರಾನಗರ	೧೮
೫) ಆರ್.ಪಿ.ಸಿ.	೬೭
೬) ಪಶ್ಚಿಮ ಕಾರ್ಡ್ ರಸ್ತೆ	೮೫
೭) ರಾಜಾಜಿನಗರ	೧೨
೮) ಸಾರಕ್ಕಿ ಬಡಾವಣೆ	೧೭೩
೯) ಬನಶಂಕರಿ	೧೨೯
೧೦) ಮಹಾಲಕ್ಷ್ಮಿ	೧೮
೧೧) ಬ.ಟಿ.ಎಂ.	೧೯
೧೨) ಮಡಿವಾಳ	೦೮
೧೩) ಇಂಡಸ್ಟ್ರಿಯಲ್ ಏರಿಯಾ ಬಡಾವಣೆ	೧೪
೧೪) ಕೆಂಗೇರಿ ಉಪನಗರ	೫೬
೧೫) ಪಿಳ್ಳಣ್ಣ ಗಾರ್ಡನ್	೭೦
೧೬) ರಾಜಮಹಲ್ ವಿಲಾಸ್ ೨ನೇ ಹಂತ	೬೯
೧೭) ಹೆಣ್ಣೂರು ಬಾಣಸವಾಡಿ	೭೪
೧೮) ಜಯನಗರ	೦೮
ಒಟ್ಟು	೧೧೨೯

ಆ) ಸರ್ಕಾರಿ ಮಾರ್ಗ ಸೂಚಿಯನ್ವಯ ಶೇ. ೫೦ ಬಿಡಿ ನಿವೇಶನಗಳನ್ನು ಹರಾಜು ಮಾಡುವ ಮೂಲಕ ವಿಲೇ ಮಾಡಲಾಗುವುದು.

೧೨–೦೦ ಪಿ.ಎಂ.

ಶ್ರೀಮತಿ ಕೆ ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ಸ್ಪೆಷ್ಲ್ ಸೈಟುಗಳನ್ನು ಶೇಕಡ ೫೦ರಷ್ಟು ಹೊರಬಾಗ ಸನಗೆ ಗೊತ್ತಿರುವ ಹಾಗೆ ತೆಗೆದುಕೊಳ್ಳುವವರು ಬೆಂಗಳೂರಿನಲ್ಲಿ ಐದು ವರ್ಷಗಳ ಕಾಲ ವಾಸವಾಗಿರಬೇಕು ಎನ್ನುವ ಒಂದು ರೂಲ್ ಇದೆ. ಉಳಿದವರು ಕಲಾವಿದರು, ಕರಕುಶಲಕರ್ಮಿಗಳು, ಲೇಖಕರು ಮತ್ತಿತರರು ಇವರು ಸೈಟುಗಳನ್ನು ಪಡೆದುಕೊಳ್ಳಬೇಕಾದರೂ ಕೆಲವೊಂದು ನಿಬಂಧನೆ ಇದೆ, ಸೈಟುಗಳನ್ನು ಕೊಡುವಾಗ ಅವುಗಳನ್ನು ತಾವು ಪಾಲನೆ ಮಾಡಿದ್ದೀರಾ ?

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಅವರ ಪ್ರಶ್ನೆ ಇರತಕ್ಕದ್ದು ''ಬೆಂಗಳೂರಂ ಅಭಿವೃದ್ಧಿ ಪ್ರಾಧಿಕಾರದವರು ೧೯೮೮ನೇ ಜನವರಿ ತಿಂಗಳಿನಿಂದ ೧೯೮೯ನೇ ಫೆಬ್ರುವರಿ ಕೊನೆಯವರೆಗೆ ಎಷ್ಟು ವಿವಿಧ ಅಳತೆಯ ನಿವೇಶನಗಳನ್ನು ಹರಾಜಿನ ಮೂಲಕ ಮಾರಾಟ ಮಾಡಿದ್ದಾರೆ, ಹಾಗೂ ಅವುಗಳ ಒಟ್ಟು ಮೌಲ್ಯವೆಷ್ಟು ಎಂದು ಹೇಳಿದ್ದಾರೆ. ನಮ್ಮ ರೂಲ್ಸ್ ಪ್ರಕಾರ ಸ್ಪೆಷ್ಲ್ ಸೈಟುಗಳಲ್ಲಿ ಶೇಕಡ ೫೦ರಷ್ಟು ಸೈಟುಗಳನ್ನು ಹರಾಜು ಹಾಕುತ್ತೇವೆ. ಶೇಕಡ ೫೦ರಷ್ಟು ಸೈಟುಗಳನ್ನು ಸ್ವಾತಂತ್ರ್ಯ

ಹೋರಾಟಗಾರರಿಗೆ ಕೊಡುತ್ತೇವೆ. ಶೇಕಡ ೨೦ರಷ್ಟು ಸೈಟುಗಳನ್ನು ಕಲಾವಿದರು, ಕರಕುಶಲ ಕರ್ಮಿಗಳು, ಪ್ರೆಸ್‌ನವರು ಮತ್ತಿತರರಿಗೆ ಕೊಡುತ್ತೇವೆ ಉಳಿದ ಶೇಕಡ ೨೫ರಷ್ಟು ಸೈಟುಗಳನ್ನು ಮಹಿಳಾ ಮಂಡಲಗಳು, ಟ್ರಸ್ಟ್‌ಗಳು, ಸಿವಿಕ್ ಅಮೆನಿಟೀಸ್‌ಗಳಿಗೆ ಕೊಡುತ್ತೇವೆ. ತಪ್ಪು ಪ್ರಶ್ನೆ ಇರತಕ್ಕದ್ದು ಮಾನ್ಯ ನಿವೇಶನಗಳನ್ನು ಹರಾಜು ಮಾಡಲಾಗಿದೆ ಎಂದು. ಸೈಟುಗಳನ್ನು ಹರಾಜು ಮಾಡುವಾಗ ಮೀಸಲು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ನಾವು ಸೈಟುಗಳನ್ನು ಮುಖ್ಯವಾಗಿ ಮತಕ್ಕೆ ಹರಾಜು ಮಾಡುತ್ತೇವೆಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಕೊಡುತ್ತೇವೆ, ಅಂಬೇಡ್ಕರ್ ಸ್ಕೀಮ್‌ನಲ್ಲಿ ೨ ಸಾವಿರ ಸೈಟುಗಳನ್ನು ಕೊಡುತ್ತೇವೆ. ನಾವು ಆ ಸೈಟಿನ ಬೆಲೆ ಏನಿದೆ ಅದರ ಶೇಕಡ ೨೫ರಷ್ಟು ಬೆಲೆಗೆ ಅವರಿಗೆ ಕೊಡುತ್ತೇವೆ. ಅದೇ ಪ್ರಕಾರ ಆರ್ಥಿಕವಾಗಿ ಹಿಂದುಳಿದವರಿಗೆ ಸೈಟುಗಳನ್ನು ಕೊಡುವಾಗ ಆ ಸೈಟಿನ ಬೆಲೆ ಏನಿದೆ ಅದರ ಶೇಕಡ ೫೦ರಷ್ಟು ಬೆಲೆಗೆ ಕೊಡುತ್ತೇವೆ ಜೊತೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಡ್ಮಿನಿಸ್ಟ್ರೇಟಿವ್ ಚಾರ್ಜ್, ಸಿಬ್ಬಂದಿ ವೆಚ್ಚ, ಪ್ರಿಂಟಿಂಗ್, ಮತ್ತಿತರೆ ಖರ್ಚುಗಳಿಗಾಗಿ ಸೈಟುಗಳನ್ನು ಹರಾಜು ಮಾಡುತ್ತೇವೆ. ಸ್ವಾತಂತ್ರ್ಯ ಹೋರಾಟಗಾರರಿಗೆ ಮತ್ತು ಬೇರೆಯವರಿಗೆ ಸೈಟುಗಳನ್ನು ಏನು ಕೊಟ್ಟಿದ್ದೇವೆ ನಾವು ಕೊಡುವಾಗ ಏನಾದರೂ ರೂಲ್ಸ್ ಬಿಟ್ಟು ಕೊಟ್ಟಿದ್ದರೆ ಅದರಲ್ಲಿ ಏನಾದರೂ ಲೋಪದೋಷಗಳಾಗಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಅದನ್ನು ನಾನು ಸರಿಪಡಿಸುತ್ತೇನೆ.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ವಕ್ಫ್ ಸಮಿತಿಗಳಿಗೆ ಪ್ರತ್ಯೇಕ ಕಛೇರಿ ಕಟ್ಟಡ

ಶ್ರೀ ಶ್ರೀ ಮಹಮ್ಮದ್ ಲೈಕುದ್ದೀನ್ (ಬೀದರ್).—ಮಾನ್ಯ ವಕ್ಫ್ ಬಂದರುಗಳು ಮತ್ತು ಅಂತರ್ಜಲ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ವಕ್ಫ್ ಸಮಿತಿಗಳಿಗೆ ಪ್ರತ್ಯೇಕವಾಗಿ ಕಛೇರಿ ಕಟ್ಟಡ ಕಟ್ಟುವುದು ಸರ್ಕಾರವು ತೀರ್ಮಾನಿಸಿದೆಯೇ;

ಆ) ಹಾಗಿದ್ದಲ್ಲಿ ಈ ಕಛೇರಿ ಕಟ್ಟಡಗಳನ್ನು ಕಟ್ಟಲು ಎಷ್ಟು ಸಮಯ ಬೇಕಾಗಿರುತ್ತದೆ ಹಾಗೂ ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ?

ಶ್ರೀ ರೋಷನ್ ಬೇಗ್ (ವಕ್ಫ್ ಬಂದರುಗಳು ಮತ್ತು ಅಂತರ್ಜಲ ಸಾರಿಗೆ ಮಂತ್ರಿಗಳು).—

ಅ) ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) (ಅ)ಕ್ಕೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

SRI MOHAMMED LAIQUDDIN.–Sir, throughout Karnataka there are not more than 20 District Wakf Committees and not a single committee has been given an independent office. At the time of inauguration of the Wakf Board, the Hon. Minister for Wakf had promised that he will provide the offices to all the District Wakf Committees. I understand that now there is no such proposal. If the District Wakf Committees are not given independent offices and are not provided accomodation to the staff members, the administration of the Wakf at the district level will be hampered. The administration of wakf at present is really in dolldrums. There is a dire necessity to establish wakf offices at the district level accomodating the Inspector-cum-Auditors, Staff members, typists etc. There are valuable wakf property records and in the absence of independent offices, they will be in danger. So my earnest request is that a positive step should be taken by the Government to provide independent offices to all the District Wakf Committees at the District level. It will not cost more to the Government. A small office accomodating the Inspector-cum-Auditor, the typist and